# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2465 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27.03.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ವಿಜಯಪುರ ಜಿಲ್ಲೆಯಾದ್ಯಂತ "ಸ್ವಚ್ಛ ವಾಹಿನಿ" ಯೋಜನೆಯಡಿ ತ್ಯಾಜ್ಯ ಸಂಗ್ರಹಣೆಗಾಗಿ ಒಟ್ಟು ಎಷ್ಟು ವಾಹನಗಳನ್ನು ನಿಯೋಜಿಸಲಾಗಿದೆ ಮತ್ತು ಪ್ರಸ್ತುತ ಅವುಗಳಲ್ಲಿ ಎಷ್ಟು ವಾಹನಗಳು ಕಾರ್ಯನಿರ್ವಹಿಸುತ್ತಿವೆ; (ಗ್ರಾಮ ಪಂಚಾಯತ್, ತಾಲ್ಲೂಕುವಾರು ಮಾಹಿತಿ ನೀಡುವುದು) | ವಿಜಯಪುರ ಜಿಲ್ಲೆಯ ಒಟ್ಟು 211 ಗ್ರಾಮ ಪಂಚಾಯಿತಿಗಳಲ್ಲಿ 216 ಸ್ವಚ್ಛ ವಾಹಿನಿ ವಾಹನಗಳು ಇರುತ್ತವೆ. ಇದರಲ್ಲಿ 182 ವಾಹನಗಳು ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಜಿಲ್ಲೆಯ ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ಡೀಸೆಲ್ ವೆಚ್ಚ ಭರಿಸಲಾಗದೆ ಮತ್ತು ವಾಹನಗಳ ದುರಸ್ತಿಯಾಗದ ಕಾರಣ ತ್ಯಾಜ್ಯ ಸಂಗ್ರಹಣೆ ಸಂಪೂರ್ಣ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸಂಪೂರ್ಣ ಮಾಹಿತಿ ನೀಡುವುದು; | ಸರ್ಕಾರದ ಸುತ್ತೋಲೆ ದಿನಾಂಕ:18.07.2022 ರಲ್ಲಿ ತಿಳಿಸಿರುವಂತೆ GPLF ಗಳು, ಗ್ರಾಮ ಪಂಚಾಯಿತಿಗಳು ವಿಧಿಸುವ ಬಳಕೆದಾರರ ಶುಲ್ಕವನ್ನು ಸಂಗ್ರಹಿಸಿ, ಸ್ವಚ್ಛ ವಾಹಿನಿಯ ಡೀಸೆಲ್ ವೆಚ್ಚಕ್ಕಾಗಿ ಬಳಸಲಾಗುತ್ತಿದೆ ಹಾಗೂ ದುರಸ್ತಿಯಲ್ಲಿರುವ 34 ವಾಹನಗಳನ್ನು ಸರಿಪಡಿಸಿಕೊಂಡು ತ್ಯಾಜ್ಯ ಸಂಗ್ರಹಣೆಯ ಕಾರ್ಯವನ್ನು ಪ್ರಾರಂಭಿಸಲಾಗುವುದು. |
| (ಇ) | "ಸ್ವಚ್ಛ ವಾಹಿನಿ" ಯೋಜನೆಯಡಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಕಳೆದ ಹಲವು ತಿಂಗಳಿಂದ ವೇತನ ಪಾವತಿಯಾಗದಿರುವುದು ಮತ್ತು ಅವರಿಗೆ ಯಾವುದೇ ಸಾಮಾಜಿಕ ಭದ್ರತೆ ಇಲ್ಲದಿರುವುದು ನಿಜವೇ; ಬಾಕಿ ಇರುವ ವೇತನದ ಒಟ್ಟು ಮೊತ್ತ ಎಷ್ಟು? ಸಂಪೂರ್ಣ ಮಾಹಿತಿ ನೀಡುವುದು; | 1. ಗ್ರಾಮ ಪಂಚಾಯಿತಿಗಳು GPLF ನೊಂದಿಗೆ ಒಡಂಬಡಿಕೆ ಮಾಡಿಕೊಂಡು ಘನತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿದ್ದು, ಸ್ವಚ್ಛ ವಾಹಿನಿ ಸಿಬ್ಬಂದಿಗಳಿಗೆ GPLF ವತಿಯಿಂದ ಗೌರವ ಧನವನ್ನು ಪಾವತಿಸಲಾಗುತ್ತಿದೆ.<br>2. ಘನ ತ್ಯಾಜ್ಯ ನಿರ್ವಹಣೆಯಡಿ ಸ್ವಚ್ಛವಾಹಿನಿ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರಿಗೆ ರೂ.30,85,000/- ಗಳು ಗೌರವ ಧನ ಪಾವತಿಗೆ ಬಾಕಿ ಇದ್ದು, ಪಾವತಿಸಲು GPLF ರವರಿಗೆ ಸೂಚಿಸಲಾಗಿದೆ.<br>3. ಸಾಮಾಜಿಕ ಭದ್ರತಾ ದೃಷ್ಟಿಯಿಂದ ಘನ ತ್ಯಾಜ್ಯ ನಿರ್ವಹಣೆ ಮಾಡುತ್ತಿರುವ GPLF ಮಹಿಳೆಯರಿಗೆ ವಿಮಾ ಯೋಜನೆಗಳಾದ ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ (PMJJBY) ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನ (PMSBY) ಯಡಿಯಲ್ಲಿ ವಿಮೆಯನ್ನು ಮಾಡಲು ಸೂಚಿಸಲಾಗಿದೆ. |

ಸಂಖ್ಯೆ: ಗ್ರಾಅಪ 336 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2465 ಗೆ ಉತ್ತರಿಸುವ ಕುರಿತು.

| | ತಾಲೂಕಿನ ಹೆಸರು | ಗ್ರಾಮ ಪಂಚಾಯತಿಗಳ ಸಂಖ್ಯೆ | ಸ್ವಚ್ಛ ವಾಹಿನಿ ವಾಹನಗಳ ಸಂಖ್ಯೆ | ಪ್ರಸ್ತುತ ಚಾಲ್ತಿಯಲ್ಲಿರುವ ಸ್ವಚ್ಛ ವಾಹಿನಿಗಳ ಸಂಖ್ಯೆ | ಪೆಟ್ರೋಲ್/ಡಿಸೇಲ್ ವೆಚ್ಚ ಭರಿಸಲಾಗದ ಸ್ಥಗಿತಗೊಂಡಿರುವ ವಾಹನಗಳ ಸಂಖ್ಯೆ | ದುರಸ್ತಿಯಲ್ಲಿರುವ ವಾಹನಗಳ ಸಂಖ್ಯೆ | ಘನ ತ್ಯಾಜ್ಯ ನಿರ್ವಹಣೆಯಡಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರ ಗೌರವಧನ ಪಾವತಿ ಬಾಕಿ ಇರುವ ಮೊತ್ತ ರೂ. | |
|---|---|---|---|---|---|---|---|---|
| | | | | | | | ಒಟ್ಟು ತಿಂಗಳು | ಮೊತ್ತ ರೂ. |
| 1 | 2 | 3 | 4 | 5 | 6 | 7 | 8 | 9 |
| 1 | ವಿಜಯಪುರ | 17 | 17 | 14 | 0 | 3 | 18 | 159000 |
| 2 | ಬಬಲೇಶ್ವರ | 15 | 15 | 15 | 0 | 0 | 18 | 405000 |
| 3 | ತಿಕೋಟ | 14 | 15 | 9 | 0 | 6 | 8 | 44000 |
| 4 | ಬಸವನ ಬಾಗೇವಾಡಿ | 15 | 15 | 15 | 0 | 0 | 32 | 339500 |
| 5 | ನಿಡಗುಂದಿ | 11 | 11 | 11 | 0 | 0 | 24 | 156000 |
| 6 | ಕೊಲ್ಹಾರ | 10 | 13 | 13 | 0 | 0 | 13 | 86500 |
| 7 | ಮುದ್ದೇಬಿಹಾಳ | 21 | 21 | 21 | 0 | 0 | 38 | 636000 |
| 8 | ತಾಳಿಕೋಟೆ | 14 | 14 | 14 | 0 | 0 | 7 | 40000 |
| 9 | ಸಿಂದಗಿ | 16 | 16 | 6 | 0 | 10 | 46 | 594000 |
| 10 | ದೇವರ ಹಿಪ್ಪರಗಿ | 14 | [illegible] | 11 | 0 | 4 | 37 | 185000 |
| 11 | ಆಲಮೇಲ | 13 | 13 | 11 | 0 | 2 | 48 | 298000 |
| 12 | ಇಂಡಿ | 38 | | 30 | 0 | 8 | 23 | 142000 |
| 13 | ಚಡಚಣ | 13 | 13 | 17 | 0 | 1 | 0 | 0 |
| | ಒಟ್ಟು | 211 | 216 | 182 | 0 | 34 | 312 | 3085000 |

ಭದ್ರತೆ ಇಲ್ಲದಿರುವುದು ನಿಜವೇ; ಬಾಕಿ ಇರುವ ವೇತನದ ಒಟ್ಟು ಮೊತ್ತ.

Scanned with CamScanner